60. ಅಗ್ರಿಕಲ್ಚರ್ (ಇನ್‌ಕ್ಲೂಡಿಂಗ್ ಸಾಯಿಲ್ ಕನ್ಸರ್‌ವೇಷನ್ ಅಂಡ್ ಹಾರ್ಟಿಕಲ್ಚರ್)
61. ಟೊಬ್ಯಾಕೋ (ಇನ್‌ಕ್ಲೂಡ್ಸ್ ಬೀಡಿ ಆಂಡ್ ಟೊಬ್ಯಾಕೋ ಪ್ರೊಸೆಸಿಂಗ್)
62. ವುಡ್‌ವರ್ಕ್ಸ್. (ಇನ್‌ಕ್ಲೂಡ್ಸ್ ಪ್ಲೈವುಡ್ಸ್ ಕಾರ್ಪೆಂಟ್ರಿ, ಸಾಮಿಲ್ಸ್ ಅಂಡ್ ಮ್ಯಾಚ್ ಇಂಡಸ್ಟ್ರೀ)
63. ಸಿರಿಕಲ್ಚರ್ ಫಾರಂ.
64. ದಿ ಡೊಮ್ಯಾಸ್ಟಿಕ್ ವರ್ಕರ್ಸ್.

ಆ) 1981ನೇ ಜನಗಣತಿಯಂತೆ 36,36,000.

ವಿಶ್ವ ಯೋಜನೆಯ ಅನುಷ್ಠಾನ

316 (362) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

1) ವಿಶ್ವ ಯೋಜನೆಯ ಅನುಷ್ಠಾನಕ್ಕೆ ಪ್ರತ್ಯೇಕ ನಿರ್ದೇಶನಾಲಯವನ್ನು ತೆರೆಯಲಾಗಿದೆಯೇ?

2) ತೆರೆದಿದ್ದಲ್ಲಿ ಈ ಇಲಾಖಾ ನಿರ್ದೇಶನಾಲಯದ ವಾರ್ಷಿಕದಲ್ಲಿ ಹೊರ ಬೀಳುವ ಅವರ್ತನ ಮತ್ತು ಅನಾವರ್ತನ ವೆಚ್ಚವನ್ನು ತಿಳಿಸುವುದು;

3) 1991-92 ನೇ ಸಾಲಿನಲ್ಲಿ ಈ ಯೋಜನೆಗೆ ಆಯವ್ಯಯದಲ್ಲಿ ನೀಡಿದ ಹಣ ಎಷ್ಟು?

4) 1992ನೇ ಜನವರಿ ಅಂತ್ಯದ ಒಳಗೆ ವಿಶ್ವ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಒದಗಿಸಿದ ಹಣ ಎಷ್ಟು?

5) ಇದುವರೆವಿಗೂ ಯಾವ ಜಿಲ್ಲೆಗಳು ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯ ಲಾಭ ದೊರೆತಿದೆ?

6) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ?

ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):-

1) ಇಲ್ಲ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಲ್ಲಿ ಬೇರೊಂದು ವಿಭಾಗವನ್ನು ಸೃಜಿಸಿ ಅಪರ ನಿರ್ದೇಶಕರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿರುತ್ತದೆ.

2) ಅನ್ವಯಿಸುವುದಿಲ್ಲ.

3) 10.00 ಕೋಟಿ ರೂಪಾಯಿಗಳು.

4) 2.00 ಕೋಟಿ ರೂಪಾಯಿಗಳು.

5) ವಿಶ್ವ ಯೋಜನೆಯಡಿಯಲ್ಲಿ ಲಾಭ ಪಡೆದ ಫಲಾನುಭವಿಗಳ ವಿವರ

ಸಂಖ್ಯೆ	ಜಿಲ್ಲೆ	ಫಲಾನುಭವಿಗಳು
1.	ಬೆಂಗಳೂರು(ರೂರಲ್)	975
2.	ಬೆಳಗಾಂ	782
3.	ಬಳ್ಳಾರಿ	1,600
4.	ಬೀದರ್	145
5.	ವಿಜಾಪುರ	580
6.	ಚಿಕ್ಕಮಗಳೂರು	451
7.	ಚಿತ್ರದುರ್ಗ	226
8.	ದಕ್ಷಿಣ ಕನ್ನಡ	495
9.	ಧಾರವಾಡ	2,438
10.	ಗುಲ್ಬರ್ಗಾ	115

11.	ಹಾಸನ	275
12.	ಕೊಡಗು	315
13.	ಕೋಲಾರ	318
14.	ಮಂಡ್ಯ	1,107
15.	ಮೈಸೂರು	1,473
16.	ರಾಯಚೂರು	310
17.	ಶಿವಮೊಗ್ಗ	1,470
18.	ತುಮಕೂರು	1,238
19.	ಉತ್ತರ ಕನ್ನಡ	108
20.	ಬೆಂಗಳೂರು (ನಗರ)	601
	ಒಟ್ಟು	15,022

6) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 495 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಉಡುಪಿ ತಾಲ್ಲೂಕು ಮಂದರ್ತಿಯಲ್ಲಿ ಸರ್ಕಾರಿ ಆಸ್ಪತ್ರೆ

318 (501) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಉಡುಪಿ ತಾಲ್ಲೂಕು ಮಂದರ್ತಿ ಮಂಡಲದ ಹತ್ತಿರ ಸುಸಜ್ಜಿತ ಆಸ್ಪತ್ರೆಗಳು ಕಾರ್ಯ ನಿರ್ವಹಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಮಂಡಲ ಕೇಂದ್ರ, ಮಂದರ್ತಿಯಲ್ಲಿ ಸರ್ಕಾರಿ ಆಸ್ಪತ್ರೆಯನ್ನು ನಿರ್ಮಿಸುವಂತೆ ಕೋರಿ ಸಾರ್ವಜನಿಕರು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇಲ್ಲಿ ಆಸ್ಪತ್ರೆ ಸ್ಥಾಪಿಸುವುದರಿಂದ ಸಾರ್ವಜನಿಕರ ಬಹುಕಾಲದ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಉಡುಪಿ ತಾಲ್ಲೂಕಿನಲ್ಲಿ ರೇಷ್ಮೆ ಕೃಷಿಗೆ ಪ್ರೋತ್ಸಾಹ

320 (361) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ರೇಷ್ಮೆ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡ ಜಿಲ್ಲೆಯ ಹವಾಗುಣ ರೇಷ್ಮೆ ಕೃಷಿಗೆ ಯೋಗ್ಯವಾಗಿರುವುದು ರೇಷ್ಮೆ ಇಲಾಖೆಗೆ ತಿಳಿದಿದೆಯೇ?

ಆ) ಈ ಪ್ರದೇಶದಲ್ಲಿ ಬೆಳೆಸಿದ ಮೊಟ್ಟೆಗಳು ಉತ್ತಮ ಗುಣಮಟ್ಟದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಉಡುಪಿ ತಾಲ್ಲೂಕಿನಲ್ಲಿ ಈಗ ಎಷ್ಟು ಎಕರೆ ಪ್ರದೇಶದಲ್ಲಿ ರೈತರು ರೇಷ್ಮೆ ಕೃಷಿ ವ್ಯವಸಾಯ ಮಾಡುತ್ತಿದ್ದಾರೆ ಹಾಗೂ ಇಲಾಖೆಯಿಂದ ಈ ಕೃಷಿಗೆ ನೀಡುವ ಪ್ರೋತ್ಸಾಹಗಳು ಯಾವುವು?